ಒಳಚರಂಡಿ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ಹಾಗೂ ಸದಸ್ಯ ಕಾರ್ಖಾನೆಗಳ ಸಹಯೋಗದೊಂದಿಗೆ ಕಾವಲುಗಾರರನ್ನು ನೇಮಿಸಿ ಹಗಲಿರುಳು ತ್ಯಾಜ್ಯ ನೀರು ಕೆರೆಗೆ ಸೇರದಂತೆ ಎಚ್ಚರಿಕೆ ವಹಿಸುವಂತೆ ಸೂಚಿಸಿರುತ್ತಾರೆ.

ನಂತರ ದಿನಾಂಕ : 3–3–11ರಂದು ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿಯವರು ಬಾಶೆಟ್ಟಿಹಳ್ಳಿ ಕೆರೆಗೆ ಕಲುಷಿತ ನೀರು ಸೇರುತ್ತಿರುವುದರ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದ್ದು, ಅದರಂತೆ ದಿನಾಂಕ : 4–3–2011 ರಂದು ಪರಿವೀಕ್ಷಣೆ ನಡೆಸಿದಾಗ ಸಾಮಾನ್ಯ ಶುದ್ಧೀಕರಣ ಘಟಕವು ಕಾರ್ಯ ನಿರ್ವಹಿಸದೇ ಇರುವುದರಿಂದ ಕಲುಷಿತ ನೀರು ಕೆರೆ ಸೇರುತ್ತಿರುವುದನ್ನು ಗಮನಿಸಲಾಯಿತು. ತಕ್ಷಣವೇ ತೆರೆದ ಚರಂಡಿಗಳಲ್ಲಿ ಹರಿಯುವ ಕಲುಷಿತ ನೀರನ್ನು ಶುದ್ಧೀಕರಣ ಘಟಕಕ್ಕೆ ಪಂಪ್ ಮಾಡಿ, ಶುದ್ಧೀಕರಿಸುವಂತೆ ಕೆ.ಐ.ಎ.ಡಿ.ಬಿ. ಅಧಿಕಾರಿಗಳಿಗೆ ಸೂಚನೆ ನೀಡಿ, ಈ ಸಂಬಂಧ ಕೆ.ಐ.ಎ.ಡಿ.ಬಿ.ಗೆ ದಿನಾಂಕ : 5–3–2011 ರಂದು ಯಾವುದೇ ಕಲುಷಿತ ನೀರನ್ನು ಸಾಮಾನ್ಯ ಶುದ್ಧೀಕರಣ ಘಟಕದಿಂದ ಹೊರ ಬಿಡದಂತೆ ಪ್ರತಿಬಂಧನ ಆದೇಶವನ್ನು ಹಾಗೂ ಸಮಜಾಯಿಸಿ ನೀಡುವಂತೆ ಕಾರಣ ಕೇಳುವ ನೋಟೀಸನ್ನು ಸಹ ನೀಡಲಾಗಿದೆ.

ಗುಂಡಾಲ್ ಜಲಾಶಯದ ನೀರಾವರಿ ಅಚ್ಚುಕಟ್ಟು ಪ್ರದೇಶ

762(450) ಶ್ರೀ ನರೇಂದ್ರ ಆರ್. (ಹನೂರು) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಹನೂರು ಕ್ಷೇತ್ರದ ಗುಂಡಾಲ್ ಜಲಾಶಯದ ನೀರಾವರಿ ಅಚ್ಚುಕಟ್ಟು ಪ್ರದೇಶವೆಷ್ಟು ; ಅದರಲ್ಲಿ ವ್ಯವಸಾಯಕ್ಕಾಗಿ ಈಗ ನೀರೊದಗಿಸುತ್ತಿರುವ ಪ್ರದೇಶ ಎಷ್ಟು ; (ಎಕರೆವಾರು ಮಾಹಿತಿ ನೀಡುವುದು) ;

ಆ) ಗುಂಡಾಲ್ ಜಲಾಶಯದ ನೀರು ಹರಿಯುವ ಮುಖ್ಯ ಕಾಲುವೆಗಳಲ್ಲಿ ಹೂಳು ತುಂಬಿರುವುದು ಹಾಗೂ ತೂಬುಗಳು ದುರಸ್ತಿಗೆ

ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಹೂಳು ತೆಗೆಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

ಇ) ಹನೂರು ಕ್ಷೇತ್ರದ ಅಜ್ಜೀಪುರ ಬಳಿ ಇರುವ ಉಡುತೊರೆ ಜಲಾಶಯ ಕಾಮಗಾರಿ ಮುಗಿದಿದ್ದು, ಅದರ ಅನೇಕ ಮುಖ್ಯ ಕಾಲುವೆಗಳು ಹಾಗೂ ಗೇಟುಗಳ ನಿರ್ಮಾಣ ಕಾಮಗಾರಿ ಮುಗಿಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಆ ಭಾಗದ ರೈತರ ವ್ಯವಸಾಯಕ್ಕೆ ನೀರನ್ನು ಒದಗಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹನೂರು ಕ್ಷೇತ್ರದ ಗುಂಡಾಲ್ ಜಲಾಶಯದಡಿಯಲ್ಲಿ ಒಟ್ಟು 15,100 ಎಕರೆ ಅಚ್ಚುಕಟ್ಟು ಪ್ರದೇಶ ಬರುತ್ತದೆ. 15,100 ಎಕರೆ ಅಚ್ಚುಕಟ್ಟಿನ ಪೈಕಿ, 5100 ಎಕರೆ ಅಚ್ಚುಕಟ್ಟನ್ನು ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ 55 ರಿಂದ 60 ವ್ಯಾಪ್ತಿಗೆ ಒಳಪಡಿಸಲಾಗಿದ್ದು, ಗುಂಡಾಲ್ ಯೋಜನೆ ಅಡಿಯಲ್ಲಿ ಪ್ರಸ್ತುತವಾಗಿ ನೀರಾವರಿಗೆ ಒಳಪಡುವ ಪ್ರದೇಶ 10000 ಎಕರೆ ಆಗಿರುತ್ತದೆ. 2011ನೇ ಸಾಲಿನ ಬೇಸಿಗೆ ಬೆಳೆಗೆ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧರಿಸಿ ಹಾಗೂ ನೀರಾವರಿ ಸಲಹಾ ಸಮಿತಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ 3533 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಅರೆ ನೀರಾವರಿ ಬೆಳೆಗೆ ನೀರೊದಗಿಸಲಾಗುತ್ತಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ. ಗುಂಡಾಲ್ ಜಲಾಶಯ ಯೋಜನೆಯ ಕಾಲುವೆಗಳ ದುರಸ್ತಿ, ಹೂಳು ತೆಗೆಯುವುದು, ಇತ್ಯಾದಿ ಕಾಮಗಾರಿಗಳನ್ನು ಪ್ರತಿ ವರ್ಷ ದೊರಕುವ ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ಕೈಗೊಳ್ಳಲಾಗುತ್ತಿದೆ. 2010-11ನೇ ಸಾಲಿನಲ್ಲಿ ಹಂಚಿಕೆಯಾಗಿರುವ ರೂ. 28.00 ಲಕ್ಷಗಳ ನಿರ್ವಹಣಾ ಅನುದಾನದಲ್ಲಿ ಹೂಳು ತೆಗೆಯುವುದು ಮತ್ತು ದುರಸ್ತಿ, ಇತ್ಯಾದಿಗಳ 10 ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ.

ಇ) ಉಡುತೊರೆಹಳ್ಳ ಜಲಾಶಯ ಮತ್ತು ಈ ಯೋಜನೆಯ ಮುಖ್ಯ ಕಾಲುವೆಗಳ ಹಾಗೂ ಗೇಟುಗಳ ನಿರ್ಮಾಣ ಪೂರ್ಣಗೊಂಡಿರುತ್ತವೆ. ಅಲ್ಲದೆ, 2009–10ನೇ ಸಾಲಿನಿಂದ ಪ್ರಾಯೋಗಿಕವಾಗಿ ಕಾಲುವೆಗಳಲ್ಲಿ ನೀರನ್ನು ಹರಿಸಲಾಗುತ್ತಿದೆ.

ಈ) ಈ ಕಾಮಗಾರಿಗಳು ಪೂರ್ಣಗೊಂಡಿದ್ದು, 2009–10ನೇ ಸಾಲಿನಿಂದ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉಬ್ಬೇಹುಣಸೆ ಜಲಾಶಯದ ಕೆಲಸ ಸ್ಥಗಿತಗೊಂಡಿರುವುದು

763(451) ಶ್ರೀ ನರೇಂದ್ರ ಆರ್. (ಹನೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಹನೂರು ಕ್ಷೇತ್ರದಲ್ಲಿ ನಿರ್ಮಾಣವಾಗುತ್ತಿರುವ ಹುಬ್ಬೇಹುಣಸೆ ಜಲಾಶಯ ನಿರ್ಮಾಣದ ಕೆಲಸ ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಅವುಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಗುತ್ತಿಗೆದಾರರು ಕಾಮಗಾರಿಯನ್ನು ಕೈಗೆತ್ತಿಕೊಳ್ಳದೇ ಇದ್ದು, ಈಗ ಗುತ್ತಿಗೆದಾರರ ಹೊಣೆ ಮತ್ತು ವೆಚ್ಚದ ಮೇಲೆ ಕಾಮಗಾರಿಯನ್ನು ರದ್ದುಪಡಿಸಿ, ಹೊಸದಾಗಿ ಟೆಂಡರ್ ಕರೆಯಲು ಮುಖ್ಯ ಇಂಜಿನಿಯರ್‌ರವರಿಗೆ ದಿನಾಂಕ : 04–02–2011 ರಂದು ಕಾವೇರಿ, ನೀರಾವರಿ ನಿಗಮದಿಂದ ಸೂಚನೆ ನೀಡಲಾಗಿದ್ದು, ಈ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಮುಂದಿನ ಸಾಲಿನಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.